# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 125

ವಿಧಾನ ಪರಿಷತ್ತಿನ ಸದಸ್ಯರ ಹೆಸರು : ಶ್ರೀ ಕೆ. ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು)

ಉತ್ತರಿಸಬೇಕಾದ ದಿನಾಂಕ : 09.12.2024

ಉತ್ತರಿಸುವ ಸಚಿವರು : ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ನಾಗರೀಕ ಪಡಿತರ ವಿತರಣೆ ವ್ಯವಸ್ಥೆಯನ್ನು ಯಾವ ವರ್ಷದಿಂದ ಪ್ರಾರಂಭಿಸಲಾಗಿದೆ ಮತ್ತು ಈ ಕಾರ್ಯಕ್ರಮ ಕೇಂದ್ರ ವಲಯ ಅಥವಾ ಕೇಂದ್ರ ಪುರಸ್ಕೃತ ಯೋಜನೆಯೇ; (ಪೂರ್ಣ ಮಾಹಿತಿ ನೀಡುವುದು) | ಕೇಂದ್ರ ಸರ್ಕಾರವು ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ 2013 (NFSA) ಯನ್ನು ಜಾರಿಗೊಳಿಸಿದ್ದು, ರಾಜ್ಯದಲ್ಲಿ ಈ ಕಾಯ್ದೆಯನ್ನು ಜನವರಿ 2014 ರಿಂದ ಜಾರಿಗೊಳಿಸಲಾಗಿದೆ. ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ ಮಾರ್ಗಸೂಚಿಗಳನ್ವಯ ಅಂತ್ಯೋದಯ ಅನ್ನ ಯೋಜನೆ (AAY) ಪಡಿತರ ಚೀಟಿಗಳಿಗೆ ತಲಾ 35 ಕೆ.ಜಿ ಆಹಾರ ಧಾನ್ಯವನ್ನು ಹಾಗೂ ಆದ್ಯತಾ ಪಡಿತರ (PHH) ಕುಟುಂಬದ ಪ್ರತಿ ಫಲಾನುಭವಿಗೆ 05 ಕೆ.ಜಿ ಆಹಾರಧಾನ್ಯವನ್ನು ಉಚಿತವಾಗಿ ವಿತರಿಸಲಾಗುತ್ತಿದೆ.<br>2022 ರ ಡಿಸೆಂಬರ್ ಮಾಹೆಯವರೆಗೆ ಅಕ್ಕಿ ಪ್ರತಿ ಕೆ.ಜಿ.ಗೆ ರೂ.3 ಮತ್ತು ರಾಗಿ ಹಾಗೂ ಜೋಳ ಪ್ರತಿ ಕೆ.ಜಿ.ಗೆ ರೂ.1 ರ ದರದಲ್ಲಿ ರಾಜ್ಯಕ್ಕೆ ಬಿಡುಗಡೆಗೊಳಿಸಲಾಗುತ್ತಿತ್ತು. ಜನವರಿ 2023ರಿಂದ ಎನ್.ಎಫ್.ಎಸ್.ಎ ಆಹಾರಧಾನ್ಯ ವನ್ನು ಪ್ರಧಾನಮಂತ್ರಿ ಗರೀಬ್ ಕಲ್ಯಾಣ ಅನ್ನ ಯೋಜನೆಯಡಿ (PMGKAY) ಉಚಿತವಾಗಿ ಬಿಡುಗಡೆಗೊಳಿಸಲಾಗುತ್ತಿದೆ.<br>ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಕೇಂದ್ರ ಸರ್ಕಾರ ನಿಗಧಿಪಡಿಸಿದ ಎನ್.ಎಫ್.ಎಸ್.ಎ ಫಲಾನುಭವಿಗಳ ಮಿತಿಗಿಂತ ಹೆಚ್ಚಾಗಿರುವ ಎನ್.ಎಫ್.ಎಸ್.ಎ ಫಲಾನುಭವಿಗಳನ್ನು ರಾಜ್ಯ ಫಲಾನುಭವಿಗಳೆಂದು ಪರಿಗಣಿಸಬೇಕಾಗಿರುತ್ತದೆ ಹಾಗೂ ಕೇಂದ್ರ ಎನ್.ಎಫ್.ಎಸ್.ಎ ಮತ್ತು ರಾಜ್ಯ ಎನ್.ಎಫ್.ಎಸ್.ಎ ಫಲಾನುಭವಿಗಳಿಗೆ ಪ್ರತ್ಯೇಕ ಹಂಚಿಕೆ ನೀಡಬೇಕಾಗಿರುತ್ತದೆ. ಕೇಂದ್ರ ಸರ್ಕಾರದಿಂದ ಸ್ವೀಕೃತವಾಗುವ 2,17,403 ಮೆ.ಟನ್ ಎನ್.ಎಫ್.ಎಸ್.ಎ ಆಹಾರ ಧಾನ್ಯ ಪ್ರಮಾಣವನ್ನು ಕೇವಲ ಕೇಂದ್ರ ಎನ್.ಎಫ್.ಎಸ್.ಎ ಫಲಾನುಭವಿಗಳಿಗೆ ಹಂಚಿಕೆ ನೀಡಲು ಅನುವಾಗುವಂತೆ ಏಪ್ರಿಲ್ 2022ರ ಮಾಹೆಯಿಂದ ಕೇಂದ್ರ ಮತ್ತು ರಾಜ್ಯ ಹಂಚಿಕೆಯನ್ನು ಪ್ರತ್ಯೇಕಿಸಲಾಗಿರುತ್ತದೆ. |

<table>
<tr>
<td></td>
<td></td>
<td>ರಾಜ್ಯದಲ್ಲಿ 38 ಲಕ್ಷ ಹೆಚ್ಚುವರಿ ಎನ್.ಎಫ್.ಎಸ್.ಎ ಆದ್ಯತಾ ಫಲಾನುಭವಿಗಳಿದ್ದು ಪ್ರತಿ ಮಾಹೆ ಅಗತ್ಯವಿರುವ ಅಕ್ಕಿ ಪ್ರಮಾಣವನ್ನು ಭಾರತೀಯ ಆಹಾರ ನಿಗಮದಿಂದ ಮುಕ್ತ ಮಾರುಕಟ್ಟೆ ಮಾರಾಟ ಯೋಜನೆ (OMSS (D) ಅಡಿ ರಾಜ್ಯ ಸರ್ಕಾರದಿಂದ ಖರೀದಿಸಿ ಸಾರ್ವಜನಿಕ ವಿತರಣಾ ಪದ್ಧತಿಯಡಿ ಪಡಿತರ ಫಲಾನುಭವಿಗಳಿಗೆ ಹಂಚಿಕೆ ಮಾಡಲಾಗುತ್ತಿದೆ.</td>
</tr>
<tr>
<td>ಆ</td>
<td>ರಾಷ್ಟ್ರೀಯ ಆಹಾರ ಭದ್ರತೆ ಕಾಯಿದೆ ಅಡಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ನಾಗರೀಕರಿಗೆ ವಿತರಿಸಲಾಗುತ್ತಿರುವ ಪಡಿತರ ಚೀಟಿಗಳು ಯಾವುವು; ಮತ್ತು ಅವುಗಳ ಸಂಖ್ಯೆ ಎಷ್ಟು; ಈ ಪಡಿತರ ಚೀಟಿಗಳ ಅಡಿಯಲ್ಲಿ ನಾಗರೀಕರಿಗೆ ವಿತರಿಸಲಾಗುತ್ತಿರುವ ಆಹಾರ ಸಾಮಗ್ರಿಗಳು ಯಾವುದು; (ವಿವರ ನೀಡುವುದು)</td>
<td>ರಾಜ್ಯದಲ್ಲಿ ಈ ಕೆಳಕಂಡಂತೆ ಪಡಿತರ ಚೀಟಿಗಳನ್ನು ವಿತರಣೆ ಮಾಡಲಾಗಿರುತ್ತದೆ.
<table>
<tr><th>ವಿವರ</th><th>ಪಡಿತರ ಚೀಟಿಗಳು</th><th>ಫಲಾನುಭವಿಗಳು</th></tr>
<tr><td>ಅಂತ್ಯೋದಯ ಅನ್ನ ಪಡಿತರ ಚೀಟಿಗಳು</td><td>10,80,648</td><td>43,66,756</td></tr>
<tr><td>ಎನ್.ಎಫ್.ಎಸ್.ಎ. ಆದ್ಯತಾ ಪಡಿತರ ಚೀಟಿಗಳು</td><td>1,02,84,000</td><td>36,17,772</td></tr>
<tr><td>ರಾಜ್ಯ ಆದ್ಯತಾ ಪಡಿತರ ಚೀಟಿಗಳು</td><td>14,74,582</td><td>38,71,596</td></tr>
<tr><td>ಒಟ್ಟು ಆದ್ಯತಾ ಪಡಿತರ ಚೀಟಿಗಳು</td><td>1,28,39,230</td><td>4,42,56,124</td></tr>
<tr><td>ಆದ್ಯತೇತರ ಪಡಿತರ ಚೀಟಿಗಳು</td><td>25,25,418</td><td>86,45,628</td></tr>
<tr><td>ಒಟ್ಟು ಪಡಿತರ ಚೀಟಿಗಳು</td><td>1,53,64,648</td><td>5,29,01,752</td></tr>
</table>
ಪಡಿತರ ಚೀಟಿಗಳಿಗೆ ಆಹಾರಧಾನ್ಯವನ್ನು ವಿತರಿಸುವ ಪ್ರಮಾಣ ಈ ಕೆಳಗಿನಂತಿರುತ್ತದೆ.
<table>
<tr><th>ಪಡಿತರ ಚೀಟಿ ವಿಧ</th><th>ಪ್ರಮಾಣ</th></tr>
<tr><td>ಅಂತ್ಯೋದಯ ಅನ್ನಯೋಜನೆ (AAY)</td><td>ಪ್ರತಿ ಪಡಿತರ ಚೀಟಿಗೆ 35 ಕೆ.ಜಿ ಆಹಾರ ಧಾನ್ಯಗಳನ್ನು ವಿತರಣೆ ಮಾಡಲಾಗುತ್ತಿದ್ದು, ಪ್ರಸ್ತುತ 21 ಕೆ.ಜಿ ಅಕ್ಕಿ ಮತ್ತು ಪ್ರಾದೇಶಿಕ</td></tr>
</table>
</td>
</tr>
</table>

<table>
<tr>
<td></td>
<td></td>
<td>
<table>
<tr><td></td><td>ಬೆಲೆ ಯೋಜನೆಯಡಿ ಖರೀದಿಸಿದ 14 ಕೆ.ಜಿ ರಾಗಿ/ ಜೋಳವನ್ನು ಹಂಚಿಕೆ ಮಾಡಲಾಗುತ್ತಿದೆ.</td></tr>
<tr><td>ಆದ್ಯತಾ ಕುಟುಂಬ (PHH)</td><td>ಪ್ರತಿ ಸದಸ್ಯರಿಗೆ 5 ಕೆ.ಜಿಯಂತೆ ಆಹಾರಧಾನ್ಯಗಳನ್ನು ವಿತರಣೆ ಮಾಡಲಾಗುತ್ತಿದ್ದು, ಪ್ರಸ್ತುತ 3 ಕೆ.ಜಿ ಅಕ್ಕಿ ಮತ್ತು ಪ್ರಾದೇಶಿಕ ಆಹಾರ ಪದ್ಧತಿಗನುಗುಣವಾಗಿ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಖರೀದಿಸಿದ 02 ಕೆ.ಜಿ ರಾಗಿ/ ಜೋಳವನ್ನು ಹಂಚಿಕೆ ಮಾಡಲಾಗುತ್ತಿದೆ.</td></tr>
</table>
ಪ್ರಸ್ತುತ ಆದ್ಯತೇತರ (ಎಪಿಎಲ್) ಪಡಿತರ ಚೀಟಿದಾರರಿಗೆ ಆಹಾರಧಾನ್ಯ ಹಂಚಿಕೆ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿರುತ್ತದೆ.
</td>
</tr>
<tr>
<td>ಇ</td>
<td>ಸಾರ್ವಜನಿಕ ಪಡಿತರ ಚೀಟಿ ಮೂಲಕ ವಿತರಿಸುವ ಆಹಾರ ಸಾಮಗ್ರಿಗಳಿಂದ ಉಂಟಾಗಿರುವ ಆರ್ಥಿಕ ಹೊರೆಯನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಯಾವ ರೀತಿ ಹಂಚಿಕೊಳ್ಳುತ್ತಿವೆ; (ಪೂರ್ಣ ಮಾಹಿತಿ ನೀಡುವುದು)</td>
<td>ಸಾರ್ವಜನಿಕ ವಿತರಣಾ ಪದ್ದತಿ/ಅನ್ನಭಾಗ್ಯ ಯೋಜನೆಯಡಿ ಕೇಂದ್ರ ವ್ಯಾಪ್ತಿಯ ಅಂತ್ಯೋದಯ ಅನ್ನ ಯೋಜನೆ(AAY) ಪ್ರತಿ ಪಡಿತರ ಚೀಟಿಗೆ ಮತ್ತು ಆಧ್ಯತಾ ಪಡಿತರ(PHH) ಚೀಟಿ ಪ್ರತಿ ಫಲಾನುಭವಿಗಳಿಗೆ ಪ್ರತಿ ಮಾಹೆ ವಿತರಿಸಲು 2,17,403 ಮೆ.ಟನ್ ಆಹಾರ ಧಾನ್ಯಗಳನ್ನು ಕೇಂದ್ರ ಸರ್ಕಾರದಿಂದ ಉಚಿತವಾಗಿ ಒದಗಿಸಲಾಗುತ್ತಿದೆ.<br><br>
ಸದರಿ ಆಹಾರ ಧಾನ್ಯಗಳಿಗೆ ಪ್ರತಿ ಕೆ.ಜಿಗೆ ಸಗಟು ಲಾಭಾಂಶ ರೂ.0.35/-,ಚಿಲ್ಲರೆ ಲಾಭಾಂಶ ರೂ.1.50/- ಮತ್ತು ಸಗಟು ಮತ್ತು ಚಿಲ್ಲರೆ ಸಾಗಾಣಿಕೆ ವೆಚ್ಚಕ್ಕಾಗಿ ರೂ.1.20/- ಗಳು, ಹೀಗೆ ಪ್ರತಿ ಕೆ.ಜಿ ಆಹಾರ ಧಾನ್ಯಕ್ಕೆ ಒಟ್ಟು ರೂ.3.05/- ಗಳನ್ನು ರಾಜ್ಯ ಸರ್ಕಾರದಿಂದ ವೆಚ್ಚ ಭರಿಸಲಾಗುತ್ತಿದೆ. ತದನಂತರದಲ್ಲಿ ಕೇಂದ್ರ ಸರ್ಕಾರದಿಂದ ಸದರಿ ಪ್ರಮಾಣದ ವಿತರಣೆಗಾಗಿ ತಗಲುವ ಚಿಲ್ಲರೆ ಲಾಭಾಂಶ ಮತ್ತು ಸಾಗಾಣಿಕೆ ವೆಚ್ಚದ ಒಟ್ಟು ವೆಚ್ಚದ ಪೈಕಿ, ಕೇಂದ್ರ ಸರ್ಕಾರ ನಿಗಧಿಪಡಿಸಿರುವ ಪ್ರತಿ ಕ್ವಿಂಟಾಲ್ ಗರಿಷ್ಟ ದರದ ಶೇಕಡ 50 ರಷ್ಟು ಮೊತ್ತವನ್ನು ಕೇಂದ್ರ ಸರ್ಕಾರವು ರಾಜ್ಯಕ್ಕೆ ಮರುಪಾವತಿಸುತ್ತದೆ. ಅದರಂತೆ ಕೇಂದ್ರ ಸರ್ಕಾರದಿಂದ ಪ್ರತಿ ಕೆ.ಜಿ ಆಹಾರ ಧಾನ್ಯಕ್ಕೆ ರೂ. 0.90/- ಗಳು ಮರು ಪಾವತಿಯಾಗುತ್ತದೆ.<br><br>
ರಾಜ್ಯ ವ್ಯಾಪ್ತಿಯ ಆಧ್ಯತಾ ಪಡಿತರ (PHH) ಫಲಾನುಭವಿಗಳಿಗೆ ಹಂಚಿಕೆ ನೀಡಲು ಪ್ರತಿ ಮಾಹೆ 17,000 ಮೆ.ಟನ್ ಅಕ್ಕಿ ಅಗತ್ಯವಿದ್ದು, ಸದರಿ ಪ್ರಮಾಣವನ್ನು ಅಕ್ಟೋಬರ್ 2024ರ ಮಾಹೆಯಿಂದ ಭಾರತ ಆಹಾರ ನಿಗಮದಿಂದ (OMSS (D) ಅಡಿಯಲ್ಲಿ ಪ್ರತಿ ಕೆಜಿಗೆ ರೂ.28/- ರಂತೆ ರಾಜ್ಯ ಸರ್ಕಾರದ ವತಿಯಿಂದ ಖರೀದಿಸಿ ಹಂಚಿಕೆ ನೀಡಲಾಗುತ್ತಿದೆ.</td>
</tr>
</table>

| | | |
|---|---|---|
| | | ಇದರೊಂದಿಗೆ ಪ್ರತಿ ಕೆ.ಜಿಗೆ ಸಗಟು ಲಾಭಾಂಶ ರೂ.0.35/-, ಚಿಲ್ಲರೆ ಲಾಭಾಂಶ ರೂ.1.50/- ಮತ್ತು ಚಿಲ್ಲರೆ ಸಾಗಾಣಿಕೆ ವೆಚ್ಚ ರೂ.0.65/- ಗಳು ಸೇರಿದಂತೆ, ಒಟ್ಟಾರೆ ಪ್ರತಿ ಕೆ.ಜಿ ಗೆ ರೂ. 31.05/- (ಅಂತರ್‌ರಾಜ್ಯ ಸಾಗಾಣಿಕೆ ವೆಚ್ಚವನ್ನು ಹೊರತುಪಡಿಸಿ) ಗಳನ್ನು ಸಂಪೂರ್ಣವಾಗಿ ರಾಜ್ಯ ಸರ್ಕಾರದಿಂದಲೇ ವೆಚ್ಚ ಭರಿಸಲಾಗುತ್ತಿದೆ. |
| ಈ | ರಾಜ್ಯ ಸರ್ಕಾರ ಅನರ್ಹ ಫಲಾನುಭವಿಗಳನ್ನು ಗ್ಯಾರಂಟಿ ಯೋಜನೆಗಳಿಂದ ಹೊರಗಿಡಲು ಪಡಿತರ ಚೀಟಿಗಳನ್ನು 'ಎ ಮತ್ತು ಬಿ' ಎಂದು ವರ್ಗೀಕರಿಸಲು ಯೋಚಿಸಿದೆಯೇ; ಹಾಗಿದ್ದಲ್ಲಿ, ಈ ಬಗ್ಗೆ ರೂಪಿಸಿರುವ ಕ್ರಮಗಳೇನು; (ಪೂರ್ಣ ಮಾಹಿತಿ ನೀಡುವುದು) | ರಾಜ್ಯದಲ್ಲಿ ಪ್ರಸ್ತುತ ಪಡಿತರ ಚೀಟಿಗಳನ್ನು ಎ ಮತ್ತು ಬಿ ಎಂದು ವರ್ಗೀಕರಿಸುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ. |
| ಉ) | ರಾಜ್ಯ ಸರ್ಕಾರ ಕೇಂದ್ರ ಸರ್ಕಾರದಂತೆ ವಿತರಿಸಿರುವ ಕುಟುಂಬಗಳ ಪಡಿತರ ಚೀಟಿಗಳನ್ನು ಆಧಾರ್ ಕಾರ್ಡ್‌ನೊಂದಿಗೆ ಜೋಡಿಸಿ ಡಿಜಿಟಲೀಕರಣಗೊಳಿಸಲು ಕಾರ್ಯಕ್ರಮ ರೂಪಿಸಿದೆಯೇ? (ಪೂರ್ಣ ಮಾಹಿತಿ ನೀಡುವುದು) | ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ- 2013 ರನ್ವಯ ಪಡಿತರ ಚೀಟಿಗಳನ್ನು ಆಧಾರ್‌ನೊಂದಿಗೆ ಜೋಡಿಸುವುದು ಕಡ್ಡಾಯವಾಗಿರುತ್ತದೆ. ರಾಜ್ಯದಲ್ಲಿ ಆದ್ಯತಾ ಪಡಿತರ ಚೀಟಿದಾರರನ್ನು ಆಧಾರ್‌ನೊಂದಿಗೆ ಜೋಡಿಸುವ ಕಾರ್ಯ ಶೇ. 99.9% ರಷ್ಟು ಪೂರ್ಣಗೊಂಡಿರುತ್ತದೆ. |

ಆನಾಸ 349 ಡಿಆರ್‌ಎ 2024

(ಕೆ.ಹೆಚ್. ಮುನಿಯಪ್ಪ)

ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ

ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ

ಇಲಾಖಾ ಸಚಿವರು